ಅಬಕಾರಿ ಬಾಕಿ ಹಣ

4419 - ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇದುವರೆವಿಗೂ ಬಾಕಿ ಇರುವ ಅಬಕಾರಿ ಮೊತ್ತ ಎಷ್ಟು?

ಆ) ಕಳೆದ ಆಯವ್ಯಯ ಭಾಷಣದಲ್ಲಿ ಪ್ರಸ್ತಾಪಿಸಿದಂತೆ "ಕರ ವಿವಾದ ಸಮಾಧಾನ" ಯೋಜನೆಯಂತೆ ವಸೂಲಾದ ಅಸಲು ಎಷ್ಟು?

ಇ) ಇದರಂತೆ ಮನ್ನಾ ಮಾಡಲಾದ ಬಡ್ಡಿ ಎಷ್ಟು?

ಈ) ಇದರ ಪ್ರಯೋಜನ ಪಡೆದ ಸಂಸ್ಥೆಗಳು ಮತ್ತು ಮಾಲೀಕರು ಯಾರು ಯಾರು?

ಶ್ರೀ ಎಂ.ಎಂ. ನಾಣಯ್ಯ (ಅಬಕಾರಿ ರಾಜ್ಯ ಸಚಿವರು) :

ಅ) (ಕೋಟಿ ರೂ.ಗಳಲ್ಲಿ)

ಅಸಲು ರೂ.	152.910
ಬಡ್ಡಿ ರೂ.	260.024

ಆ) ಯೋಜನೆ ಇನ್ನೂ ಜಾರಿಗೆ ಬಂದಿರುವುದಿಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಹಸಿರು ಪಡಿತರ ಚೀಟಿಗಳ ಬದಲಾಗಿ ಹೊಸ ಪಡಿತರ ಚೀಟಿಗಳನ್ನು ನೀಡುವುದು

4420 - ಶ್ರೀ ಅಂಗಾರ್ ಎಸ್. (ಸೂಳ್ಯ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಹಸಿರು ಪಡಿತರ ಚೀಟಿಗಳ ಬದಲಾಗಿ ಹೊಸ ಪಡಿತರ ಚೀಟಿಗಳನ್ನು ನೀಡಲಾಗುವುದೇ?

ಆ) ಹಸಿರು ಪಡಿತರ ಚೀಟಿಗಳನ್ನು ವಾಪಸ್ ಪಡೆಯಲು ಕಾರಣಗಳೇನು?

ಇ) ರಾಜ್ಯದಲ್ಲಿರುವ ಹಸಿರು ಪಡಿತರ ಚೀಟಿಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)

ಈ) ಹಸಿರು ಪಡಿತರ ಚೀಟಿಗಳ ಬದಲಾಗಿ ಯಾವ ರೀತಿಯ ಪಡಿತರ ಚೀಟಿಗಳನ್ನು ನೀಡಲಾಗುವುದು?